ಗಳಲ್ಲಿ ಸರ್ಕಾರದ ಆದೇಶದ ಸಂಖ್ಯೆ ಎಸ್‌ಡಬ್ಲ್ಯು/ಎಲ್‌/ಎಸ್ ಎಸ್‌ಸಿ/೧೩, ದಿನಾಂಕ ೨೧-೪-೮೪ರ ಪ್ರಕಾರ ನೊಂದವರಿಗೆ ಪರಿಹಾರ ಧನವಾಗಿ ೧,೮೮,೮೭೫ ರೂಪಾಯಿಯನ್ನು ಶಿಫಾರಸ್ಸು ಮಾಡಲಾಗಿದೆ.

ರಾಯಚೂರು ನಗರದಲ್ಲಿ ಸಂಚಾರಿ ಆರಕ್ಷಕ ಠಾಣೆಯೆನ್ನು ತೆರೆಯುವುದು.

೧೦೭೮ ಶ್ರೀ ಮಹಮದ್ ಉಮರ್ (ರಾಯಚೂರು). — ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ನಗರದ ಆಕ್ಕಪಕ್ಕದಲ್ಲಿ ಕೈಗಾರಿಕೆಗಳು ವಾಹನ ಸಂಚಾರದ ಹೆಚ್ಚಳದಿಂದ ಕಾಯ್ದೆ ಮಂತ್ತು ಸುವ್ಯವಸ್ಥೆಯ ಸಮಸ್ಯೆಗಳನ್ನು ಒಡ್ಡಿ ತೊಂದರೆಗಳನ್ನುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು). —

ಅ) ಹೌದು.

ಆ) ರಾಯಚೂರು ನಗರದಲ್ಲಿ ವಾಹನ ಸಂಚಾರ ನಿಯಂತ್ರಿಸಲು ಪ್ರತ್ಯೇಕ ಸಂಚಾರಿ ಪೋಲೀಸ್ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ರಾಯಚೂರು ಜಿಲ್ಲೆಯ ಪೂರ್ವ ಯೋಜಿತ ಯೋಜನೆ ೧೯೮೫-೮೬ ರಿಂದ ೧೯೮೯-೯೦ ರಲ್ಲಿ ಅಳವಡಿಸಲಾಗಿದೆ. ಈಗಾಗಲೇ ೧೯೮೫-೮೬ ಪೂರ್ವ ಯೋಜಿತ ಯೋಜನೆಯನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ನಿರೀಕ್ಷಕರು ಸರ್ಕಾರಕ್ಕೆ ಕಳುಹಿಸಿರುವುದರಿಂದ, ರಾಯಚೂರು ನಗರದಲ್ಲಿ ಪ್ರತ್ಯೇಕ ಟ್ರಾಫಿಕ್ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾಪವನ್ನು ಮುಂದಿನ ೧೯೮೬-೮೭ ರಿಂದ ೧೯೮೯-೯೦ರ ಪೂರ್ವ ಯೋಜಿತ ಯೋಜನೆಯಲ್ಲಿ ಸೇರಿಸಲು ಪರಿಶೀಲಿಸಲಾಗುವುದು.

ಸವದತ್ತಿಯಲ್ಲಿರುವ ಆಸ್ಪತ್ರೆಗಳಿಗೆ ಹಾಸಿಗೆಗಳ ಸಂಖ್ಯೆ ಹೆಚ್ಚಿಸುವುದು

೫೫೧ ಶ್ರೀ ಚಂದ್ರಶೇಖರ ವಾಮನಿ (ಪರಸಗಡ) ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವದತ್ತಿ ನಗರದಲ್ಲಿ ೫೦ ಹಾಸಿಗೆಗಳ ಕಾಟೇಜ್ ಆಸ್ಪತ್ರೆಯಿದ್ದು ಅದು ಅಲ್ಲಿನ ಅವಶ್ಯಕತೆಗಳನ್ನು ಪೂರೈಸಲಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಆಸ್ಪತ್ರೆಯನ್ನು ೧೦೦ ಹಾಸಿಗೆಗಳಿಗೆ ಹೆಚ್ಚಿಸಲು ಸರ್ಕಾರದವರ ಉದ್ದೇಶ ವೇನಾದರೂ ಇದೆಯೇ?

ಇ) ಹಾಗಿದ್ದಲ್ಲಿ ಹಾಸಿಗೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವರೇ ? ಹಾಗೂ ಎಷ್ಟು ಅವಧಿಯೊಳಗಾಗಿ ಈ ವ್ಯವಸ್ಥೆಯನ್ನು ಏರ್ಪಾಡು ಮಾಡಲಾಗುವುದು?

ಶ್ರೀ ಎಚ್. ಎಲ್. ತಿಮ್ಮೇಗೌಡ. (ಆರೋಗ್ಯ ಮಂತ್ತು ಕುಟುಂಬ ಕಲ್ಯಾಣ ಸಚಿವರು). —

ಅ) ಬಂದಿದೆ.

ಆ) ಸದ್ಯಕ್ಕೆ ಇಲ್ಲ.

ಇ) ಉದ್ಭವಿಸುವುದಿಲ್ಲ.